# ಕುವೆಂಪು ವಿಶ್ವವಿದ್ಯಾಲಯ

Accredited by NAAC with "A" Grade

73rd All India Rank in NIRF

ಸಂಖ್ಯೆ : ಕುವಿ/ಪವಿ/ಡಿಎಸ್-2/D8261/2019-20

ರಿಜಿಸ್ಟ್ರಾರ್ (ಮೌಲ್ಯಮಾಪನ) ರವರ ಕಛೇರಿ
ಜ್ಞಾನಸಹ್ಯಾದ್ರಿ ಶಂಕರಘಟ್ಟ – 577451
ಶಿವಮೊಗ್ಗ ಜಿಲ್ಲೆ
ದಿನಾಂಕ: 09-01-2020

## ಸುತ್ತೋಲೆ

ವಿಷಯ : ವಿಶ್ವವಿದ್ಯಾಲಯದ ದೂರಶಿಕ್ಷಣದ 2018-19ರ ಸಾಲಿನ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಪ್ರಾಯೋಗಿಕ ಪರೀಕ್ಷೆಗಳ ಹಾಗೂ ಆಂತರಿಕ ಅಂಕಗಳನ್ನು ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡುವ ಕುರಿತು.

ಉಲ್ಲೇಖ : ಅಧಿಸೂಚನೆ ಸಂಖ್ಯೆ: ಕುವಿ/ಪವಿ/ಡಿಎಸ್/ಡಿ8194/2019-20, ದಿ.06-01-2020

******

ದೂರಶಿಕ್ಷಣ ನಿರ್ದೇಶನಾಲಯದಲ್ಲಿ 2018-19ರ ಸಾಲಿನ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಪರೀಕ್ಷೆಗಳನ್ನು ದಿನಾಂಕ: 03-02-2020 ರಿಂದ ನಡೆಸಲಾಗುವುದೆಂದು ಉಲ್ಲೇಖಿತ ಅಧಿಸೂಚನೆಯಲ್ಲಿ ತಿಳಿಸಲಾಗಿರುತ್ತದೆ. ಈ ಸಂಬಂಧ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಪ್ರಾಯೋಗಿಕ ಪರೀಕ್ಷೆಗಳ ಅಂಕ ಮತ್ತು ಆಂತರಿಕ (I.A.) ಅಂಕಗಳನ್ನು ದಿನಾಂಕ: **10-01-2020 ರಿಂದ 30-01-2020** ರೊಳಗೆ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಕಡ್ಡಾಯವಾಗಿ ಸೇರ್ಪಡೆ (ಅಪ್‌ಲೋಡ್) ಮಾಡಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಸೂಚನೆ:

1. ಪ್ರಾಯೋಗಿಕ ಮತ್ತು ಆಂತರಿಕ (I.A.) ಅಂಕಗಳನ್ನು ವೆಬ್‌ಸೈಟ್‌ಗೆ 2013ರಿಂದ ಜಾರಿಯಲ್ಲಿರುವ ನಿಯಮದ ಪ್ರಕಾರವೆ oasis.logisys.org/kusdde ನಲ್ಲಿ ಲಾಗಿನ್ ಆಗಿ ನಮೂದಿಸಬೇಕು. ಪ್ರಾಯೋಗಿಕ ಅಂಕಗಳನ್ನು Practical Marks option ನಲ್ಲಿ ಸೇರ್ಪಡೆ ಮಾಡಬೇಕು ಮತ್ತು ಆಂತರಿಕ ಅಂಕಗಳನ್ನು Before Exam – I.A. Marks – I.A. Marks Entry option ನಲ್ಲಿ ಸೇರ್ಪಡೆ ಮಾಡಬೇಕು.
2. ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರ ಲಿಖಿತ ಪರೀಕ್ಷೆಗಿಂತ ಮುಂಚಿತವಾಗಿ ಪ್ರಾಯೋಗಿಕ ಮತ್ತು ಆಂತರಿಕ ಅಂಕಗಳು ದಾಖಲಾಗಬೇಕಾಗಿರುತ್ತದೆ.
3. ಎಲ್ಲಾ ವಿದ್ಯಾರ್ಥಿಗಳ ಅಂಕಗಳನ್ನು upload ಮಾಡಿದ ನಂತರ ಪರಿಶೀಲಿಸಿ freeze ಮಾಡಬೇಕು. ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಲ್ಲಿ ಅಂತಹ ಪ್ರಕರಣಗಳನ್ನು ತಪ್ಪದೇ Absent ಎಂದು ನಮೂದಿಸತಕ್ಕದ್ದು. ಯಾವುದೇ ಕಾರಣಕ್ಕೂ ಖಾಲಿ ಬಿಡತಕ್ಕದ್ದಲ್ಲ. ನಂತರ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ. ಹಾಗಾಗಿ ಎಲ್ಲಾ ವಿದ್ಯಾರ್ಥಿಗಳ ಅಂಕಗಳನ್ನು upload ಮಾಡಿರುವ ಬಗ್ಗೆ ಪರಿಶೀಲಿಸಿ ಖಾತ್ರಿ ಮಾಡಿಕೊಳ್ಳತಕ್ಕದ್ದು. ವಿದ್ಯಾರ್ಥಿಗಳ ಹೆಸರು ಬಿಟ್ಟು ಹೋಗಿದ್ದಲ್ಲಿ ಅಥವಾ ಬದಲಾವಣೆ ಏನಾದರೂ ಇದ್ದಲ್ಲಿ ಕೊನೆಯ ದಿನಾಂಕದೊಳಗಾಗಿ ಪರೀಕ್ಷಾ ವಿಭಾಗವನ್ನು ಸಂಪರ್ಕಿಸುವುದು. **ನಂತರದಲ್ಲಿ ಯಾವುದೇ ವಿದ್ಯಾರ್ಥಿಗಳ ವಿಷಯದ ಮುಂದೆ ಖಾಲಿ ಇದ್ದಲ್ಲಿ/ಅಂಕ ನಮೂದಿಸದೆ ಇದ್ದಲ್ಲಿ ಗೈರು ಹಾಜರಿ ಎಂದು ನಮೂದಿಸಿ ಫಲಿತಾಂಶ ಪ್ರಕಟಿಸಲಾಗುವುದು.**
4. ಎಲ್ಲಾ ವಿದ್ಯಾರ್ಥಿಗಳ ಅಂಕಗಳನ್ನು upload ಮಾಡಿದ ನಂತರ ಪ್ರಾಯೋಗಿಕ ಪರೀಕ್ಷೆಯ (ಐ.ಎ. ಹೊರತುಪಡಿಸಿ) ಅಂಕಗಳ ಮೂಲ ಪ್ರತಿಗಳನ್ನು ಉತ್ತರ ಪತ್ರಿಕೆಗಳೊಂದಿಗೆ ಅಂದರೆ B.Sc, M.Sc, M.L.I.Sc, B.L.I.Sc ಪ್ರತ್ಯೇಕವಾಗಿ ಬಂಡಲ್ ಮಾಡಿ ದಿನಾಂಕ:01-02-2020 ರೊಳಗಾಗಿ ಕುಲಸಚಿವ(ಪರೀಕ್ಷಾಂಗ)ರವರಿಗೆ ಕಡ್ಡಾಯವಾಗಿ ಕಳುಹಿಸಿಕೊಡುವುದು.
5. ನಿಗದಿತ ದಿನಾಂಕದೊಳಗೆ upload ಮಾಡದಿರುವ ಹಾಗೂ ಹಾರ್ಡ್ ಕಾಪಿಯಲ್ಲಿ ಸಲ್ಲಿಸುವ ಅಂಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲವೆಂದು ತಿಳಿಸಲಾಗಿದೆ. ಒಂದು ವೇಳೆ ಅಂತಹ ಪ್ರಕರಣಗಳು ಉಂಟಾದಲ್ಲಿ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವುದಿಲ್ಲ, ಇದರಿಂದ ಉಂಟಾಗುವ ತೊಂದರೆಗಳಿಗೆ ತಾವೆ ನೇರ ಹೊಣೆಗಾರರಾಗಿರುತ್ತೀರಿ ಎಂಬುದನ್ನು ಸ್ಪಷ್ಟಪಡಿಸಲಾಗಿದೆ.
6. Upload ಮಾಡುವ ಸಂದರ್ಭದಲ್ಲಿ ಯಾವುದೇ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ logisys.helpdesk@gmail.com email ಮೂಲಕ ತಿಳಿಸುವುದು.

"ಕರಡು ಕುಲಸಚಿವ(ಪರೀಕ್ಷಾಂಗ) ರವರಿಂದ ಅನುಮೋದಿಸಲ್ಪಟ್ಟಿದೆ"

Kariyappa. N.S 9.1.20

ಉಪಕುಲಸಚಿವರು (ಪರೀಕ್ಷಾಂಗ)

ಉಪಕುಲಸಚಿವ (ಪರೀಕ್ಷಾಂಗ)
ದೂರಶಿಕ್ಷಣ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ-577 451

ಗೆ,

1. ನಿರ್ದೇಶಕರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
2. ವಿಶ್ವವಿದ್ಯಾಲಯದ ಎಲ್ಲಾ ದೂರಶಿಕ್ಷಣದ ಅಧ್ಯಯನ ಕೇಂದ್ರಗಳ ಕೋ-ಆರ್ಡಿನೇಟರ್‌ಗಳಿಗೆ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ

ಪ್ರತಿ:

1. ಮಾನ್ಯಕುಲಪತಿಗಳ ಆಪ್ತ ಸಹಾಯಕರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಮಾಹಿತಿಗಾಗಿ
2. ಉಪಕುಲಸಚಿವರು/ಸಹಾಯಕ ಕುಲಸಚಿವರು, ದೂರಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ಮಾಹಿತಿಗಾಗಿ